# ರಸ್ತೆ ಕ್ಯೂರಿಂಗ್‌ಗೆ ಅಡಿಕೆ ಸಿಪ್ಪೆ

ರಸ್ತೆಗೆ, ಗೋಡೆಗೆ ಸಿಮೆಂಟ್ ಹಾಕಿದ ನಂತರ ಕ್ಯೂರಿಂಗ್ ಮಾಡಲು ನೀರು ಹಾಕುವುದು ಗೊತ್ತು. ಆದರೆ ಸಿಮೆಂಟ್ ರಸ್ತೆಗೆ ಕ್ಯೂರಿಂಗ್ ಸಾಧನವಾಗಿ ಅಡಿಕೆ ಸಿಪ್ಪೆ ಬಳಸುವುದು ಕಡಿಮೆ.

ಸಾಗರದ ಇಂದಿರಾಗಾಂಧಿ ಪ್ರಥಮ ದರ್ಜೆ ಮಹಿಳಾ ಕಾಲೇಜಿಗೆ ಹೋಗುವ ಮಾರ್ಗದಲ್ಲಿ ಹೊಸದಾಗಿ ಮಾಡಲಾದ ಸಿಮೆಂಟ್ ರಸ್ತೆಗೆ ಅಡಿಕೆ ಸಿಪ್ಪೆ ಹೊದಿಸಿ ನೀರು ಹಾಕಲಾಗಿದೆ. ಅಡಿಕೆ ಸಿಪ್ಪೆಗೆ ನೀರು ಹಾಕುವುದರಿಂದ ದೀರ್ಘಕಾಲ ತೇವಾಂಶ ಹಿಡಿದುಕೊಳ್ಳುತ್ತದೆ. ಈ ಕಾರಣಕ್ಕೆ ರಸ್ತೆಗೆ ಈ ಉಪಾಯ ಮಾಡಿ ಅಡಿಕೆ ಸಿಪ್ಪೆ ಹಾಸಲಾಗಿದೆ. ಇದರಿಂದ ದಿನನಿತ್ಯ ನೀರು ಹಾಕಿ ಕ್ಯೂರಿಂಗ್ ಮಾಡುವ ಅಗತ್ಯವಿಲ್ಲವೆಂದು ಈ ಗುತ್ತಿಗೆದಾರರು ಈ ಉಪಾಯ ಕಂಡುಕೊಂಡಿದ್ದಾರೆ. ಅಡಿಕೆ ಕಾಯಿಯ ಮೌಲ್ಯವರ್ಧನೆ ಹೀಗೂ ಆಗಬಲ್ಲದು. ಅಡಿಕೆ ಬೆಳೆಗಾರರ ಅಡಿಕೆ ಸಿಪ್ಪೆಗೆ ಹೆಚ್ಚು ಬೆಲೆಯೂ ಬಂದೀತು !

**ಚಿತ್ರ-ಬರಹ: ಗಣಪತಿ ಶಿರಳಗಿ, ಸಾಗರ**





# ಮಹಾಕೂಟದ ಕೆನೆಮೊಸರು

ದಕ್ಷಿಣ ಕಾಶಿ ಮಹಾಕೂಟ ಪುಣ್ಯ ಕ್ಷೇತ್ರ. ಈ ಮಹಾಕೂಟದ ದ್ವಾರ ದಾಟಿದ ಕೂಡಲೇ ಮೊಸರು ಗಡಿಗೆಗಳು ಕಣ್ಣಿಗೆ ಬೀಳುತ್ತವೆ. ವರ್ಷದ ಹನ್ನೆರಡು ತಿಂಗಳು ಇಲ್ಲಿ ಗಡಿಗೆಯಲ್ಲಿನ ಕೆನೆ ಮೊಸರು ತಿನ್ನಲು ಸಿಗುವುದು ವಿಶೇಷ. ಮಣ್ಣಿನ ಮಡಿಕೆಯಲ್ಲಿ ಹಿಂದಿನ ದಿನ ಮೊಸರನ್ನು ಹೆಪ್ಪು ಹಾಕಿರುತ್ತಾರೆ. ಇಲ್ಲಿ ಭೇಟಿ ನೀಡುವ ಪ್ರತಿಯೊಬ್ಬರೂ ಕೆನೆಮೊಸರು ಸವಿಯುವುದು ಉಂಟು. ತಿನ್ನುವವರಿಗೆ ಮೊಸರಿನಲ್ಲಿ ಸಕ್ಕರೆ ಹಾಕಿ ಕೊಡುತ್ತಾರೆ. ಇಲ್ಲಿ ಊಟ ಮಾಡುವವರು ಕೂಡಾ ಈ ಕೆನೆಮೊಸರು ತೆಗೆದುಕೊಳ್ಳುತ್ತಾರೆ. ವಿಶೇಷವಾಗಿ ವಿದೇಶಿ ಪ್ರವಾಸಿಗರು ಇಲ್ಲಿನ ಕೆನೆಮೊಸರು ಸವಿದು ಖುಷಿ ಪಡುತ್ತಾರೆ. ಸಣ್ಣದಾಗಿರುವ ಚಿಕ್ಕ ಗಡಿಗೆಗೆ 10ರಿಂದ 15 ರೂಪಾಯಿ. ಮೊಸರಿನ ಗಡಿಗೆ ಗಾತ್ರಕ್ಕೆ ತಕ್ಕಂತೆ ದರ ಇರುತ್ತದೆ.

**ಚಿತ್ರ-ಬರಹ: ಮಲ್ಲಿಕಾರ್ಜುನ ರಾಜನಾಳ, ಬಾಗಲಕೋಟ**

# ಕಬ್ಬಿನ ಜಲ್ಲೆ ಮಂಚ

ಸಾಮಾನ್ಯವಾಗಿ ಬಿದಿರಿನ ಬೆತ್ತ, ತೆಂಗಿನ ನಾರಿನ ಹಗ್ಗ, ಪ್ಲಾಸ್ಟಿಕ್ ಟೇಪ್, ಕಟ್ಟಿಗೆ, ಕಬ್ಬಿಣ ಮುಂತಾದವುಗಳಿಂದ ಮಾಡಿದ ಮಂಚವನ್ನು ನೋಡಿದ್ದೇವೆ. ಈ ಆರು ಕಾಲಿನ ಮಂಚ ಮಾತ್ರ ಸಿಹಿ ಸಿಹಿ ರಸವತ್ತಾದ ಕಬ್ಬಿನ ಜಲ್ಲೆಗಳಿಂದ ಮಾಡಿದ್ದು ನೋಡುಗರ ಬಾಯಲ್ಲಿ ನೀರೂರಿಸುತ್ತಿದೆ. ಇದನ್ನು ನೋಡಿದ್ದು ಮಲೆನಾಡಿನ ಹಳ್ಳಿಯೊಂದರ ಆಲೇಮನೆಯಲ್ಲಿ. ನೂರಾರು ಕಬ್ಬಿನ ಜಲ್ಲೆಗಳನ್ನು ಬಳಸಿ ಮಾಡಿದ ಮಂಚದ ಮೇಲೆ ಆಲೇಮನೆಗೆ ಬಂದವರ ಆತಿಥ್ಯಕ್ಕಾಗಿ ಎಲೆ ಅಡಿಕೆ ಮೊದಲಾದ ತಾಂಬೂಲದ ವಸ್ತುಗಳನ್ನು ಒಪ್ಪವಾಗಿ ಜೋಡಿಸಿದ್ದಾರೆ. ಹಾ ...! ಕುಳಿತುಕೊಳ್ಳುವ ಪ್ರಯತ್ನ ಮಾತ್ರ ಪಕ್ಕದ ಖುರ್ಚಿಯ ಮೇಲೆ ಮಾಡಿ.

**– ಸುಮಂಗಲಾ ಹೆಗಡೆ ಹುಕ್ಕಳ್ಳಿ, ಧಾರವಾಡ**

